

ನುಂಗುತ್ತಿದ್ದಳು. ಹಾಗೆ ಎಷ್ಟು ಮಾತ್ರೆ ನುಂಗಿದಳೋ ಲೆಕ್ಕವೇ ಇಲ್ಲ. ನೀವು ಓದುವಾಗ ನಿಮ್ಮ ಪರೀಕ್ಷೆ ಇದ್ದಾಗ ನಿಮಗೆ ಕಾವಲು ಕಾಯುತ್ತಿದ್ದಳು. ನಿದ್ದೆ ಬರದ ಹಾಗೆ ಮಾತ್ರೆ ನುಂಗುತ್ತಿದ್ದಳು. ಒಂದೊಂದು ಸಲ ಎಷ್ಟು ಹೊತ್ತಾದರೂ ನಿದ್ದೆ ಬಾರದಿದ್ದಾಗ ನಿದ್ದೆ ಬರಲು ಮಾತ್ರೆ ನುಂಗುತ್ತಿದ್ದಳು. ಹೀಗೆ ಯದ್ವಾ ತದ್ವಾ ಚಿಕಿತ್ಸೆ. ಕೆಲಸದ ಒತ್ತಡದಲ್ಲಿಯೂ, ಷೇರು ಕೊಳ್ಳುವುದು, ಮಾರುವುದು, ಜಮೀನು ಕೊಳ್ಳುವುದು, ಮಾರುವುದು, ಚಿನ್ನ ಅಡ ಇಟ್ಟು ಸಾಲ ತಂದು ಚಿನ್ನ ಕೊಂಡು ಇನ್‌ಸ್ಟಾಲ್ ಮೆಂಟ್ ಕಟ್ಟುವುದು. ಸಂಬಳದಲ್ಲಿ ಆದಷ್ಟು ಹಣ ಉಳಿಸಲು ತಂಗಳು ಉಣ್ಣುವುದು. ಒಂದಲ್ಲಾ ಎರಡಲ್ಲ ಇಗೋ ಈ ದಿನ ನೀವೆಲ್ಲಾ ಹೀಗೆ ಇರಬೇಕು ಅಂತ ಅವಳು ನುಂಗಿದ ಮಾತ್ರೆಗಳಿಗೆ ಲೆಕ್ಕವಿಲ್ಲ. ಅದಾಯ್ತಾ ಎಂಟು ವರ್ಷದ ಹಿಂದೆ ಓವರ್ ಬ್ಲೀಡಿಂಗ್ ಶುರುವಾಯಿತು. ಅದು ಹೇಸಿಗೆ ಅಲ್ಲವಾ! ಒಬ್ಬ ಡಾಕ್ಟರು 'ಚೀಲ ಕತ್ತರಿಸಿ ಬಿಸಾಕಿದರೆ ಸಾಕು, ಹಾಯಾಗಿ ಇರುತ್ತೀ' ಅಂತ ಸಲಹೆ ಕೊಟ್ಟ. ಗರ್ಭಚೀಲವೂ ಹೋಯಿತು. ಓವರೀಸ್ ನಲ್ಲಿ ಅದೇನೋ ಇತ್ತು ಅಂತ ಅದನ್ನೂ ಕತ್ತರಿಸಿದರು.

'ಸದ್ಯ ನಾನು ಕೂಡಾ ಗಂಡಸರ ಹಾಗೆ ತಿಂಗಳ ಮೂವತ್ತು ದಿನ ದುಡಿಯಬಹುದು' ಎಂದು ಜಂಭ ಕೊಚ್ಚಿದಳು. ಇಷ್ಟರಲ್ಲಿ ಮತ್ತಾವುದೋ ಕಾಂಪ್ಲಿಕೇಶನ್ನು ಬಂತು. ಸಪ್ಲಿಮೆಂಟರಿ ಮಾತ್ರೆ ಕೊಡಬೇಕು ಅಂದರು. ಅವೂ ಮಾತ್ರೆಗಳೇ. ಮೇಲಾಗಿ ಸುಸ್ತಿಗೆ ಈ ತಾಯಿ ತನ್ನಷ್ಟಕ್ಕೆ ತಾನೇ ದಿನಾಲೂ ಬಿ ಕಾಂಪ್ಲೆಕ್ಸ್ ಮಾತ್ರೆ ನುಂಗುತ್ತಿದ್ದಳು. ನಲವತ್ತೈದರ ನಂತರ ಬಿಪಿ, ಷುಗರು ಶುರು. ಅದಕ್ಕೂ ದಿನಕ್ಕೆರಡು ಮಾತ್ರೆ. ಮಕ್ಕಳು ಸೆಟಲ್ ಆದರು. ಮಗನನ್ನು ಎಂಜಿನಿಯರ್ ಮಾಡಿ ಸ್ಟೇಟ್ಸ್‌ಗೆ ಅಟ್ಟಿದಳು. ನಿನಗೆ ಅಮೆರಿಕದ ಗಂಡನನ್ನು ತಂದು ಆ ಸಾಲ ತೀರಿಸಿದಳು. ಈಗ ಹೊಸ ಸಂಗತಿ ಏನಂದರೆ ಕಳೆದ ಒಂದು ವರ್ಷದಿಂದ ಅದ್ಯಾವುದೋ ಚಾನೆಲಿನಲ್ಲಿ ಹಿಂದಿ ಸೀರಿಯಲ್ ದಿನಾಲೂ ರಾತ್ರಿ ಹನ್ನೊಂದುವರೆಗೆ ಬರತಾ ಇದೆ. ಅದು ಮಹಾ ಸಸ್ಪೆನ್ಸ್ ಸೀರಿಯಲ್. ಅದು ನೋಡುವ ತನಕ ಈಕೆ ಮಲಗುವುದಿಲ್ಲ. ಅದು ಮುಗಿಯುವುದು ರಾತ್ರಿ ಹನ್ನೆರಡಕ್ಕೆ. ಹನ್ನೆರಡರ ನಂತರ ಆ ಪರಿಯ ಸಸ್ಪೆನ್ಸಿನಲ್ಲಿ ಸೀರಿಯಲ್ ನಿಂತಾಗ ಈಕೆಗೆ ನಿದ್ದೆ ಬರುವುದಿಲ್ಲ. ಹಾಗಾಗಿ ಮತ್ತೆ ಮಾತ್ರೆ ನುಂಗಲೇಬೇಕು. ತಿರುಗಿ ಮುಂಜಾನೆ ಐದು ಗಂಟೆಗೆ ಏಳಲೇ ಬೇಕಲ್ಲವೇ. ಇದಮ್ಮಾ ಆ ಕಾಯಿಲೆ' ಪ್ರಕಾಶರಾವು ತಾನು ಬರೆದುಕೊಂಡಿದ್ದ ನೋಟ್ಸ್ ಚೀಲದಲ್ಲಿ ಹಾಕಿಕೊಂಡು ಕನ್ನಡಕ ತೆಗೆದು ಒರೆಸಿ ಮತ್ತೆ ಹಾಕಿಕೊಂಡ.

'ಇದೆಲ್ಲಾ ನನಗೆ ಗೊತ್ತಿಲ್ಲ – ಇಟ್ ಈಸ್ ಕ್ವಯಟ್ ಅಮೇಜಿಂಗ್ ಅಂಕಲ್, ಐ ಡಿಂಟ್ ನೋ – ಹೌ ಸಾಡ್' ಅಂದಳು ರಜನಿ.

'ಹೌದಮ್ಮಾ. ಯೂ ಡಿಂಟ್ ನೋ. ಯಾಕೆಂದರೆ ನೀನು ಯಾವಾಗ ಅಮೆರಿಕ ಗಂಡನನ್ನು ಕಟ್ಟಿಕೊಂಡೆನೋ, ಡಾಲರ್ ರುಚಿ ಕಂಡೆನೋ ಅನ್ನುವ ಧ್ಯಾನದಲ್ಲಿದ್ದೆ. ಅಮ್ಮನ ಬಗ್ಗೆ ಯೋಚನೆ ಮಾಡುವ ಸಮಯ ನಿನಗೆಲ್ಲಿಯದು ಪಾಪ!' ಅನ್ನುತ್ತಾ ಪ್ರಕಾಶರಾವು ಗೇಟು ದಾಟಿದ.

ಸುಶೀಲ ಬಟ್ಟಲುಗಣ್ಣು ಮಾಡಿಕೊಂಡು ನೋಡುತ್ತಿದ್ದವಳು ಮನೆಗೆ ಓಡಿದಳು. ಅವಳಿಗೆ ಅಮ್ಮನನ್ನು ಅಪ್ಪಿಕೊಂಡು ಅಳಬೇಕನಿಸಿತು. ಅಮ್ಮನನ್ನು ಕಾಪಾಡಿಕೊಳ್ಳಬೇಕು ಅನಿಸಿತು.

●